148th, ಕ್ರ.ಸಂ. 39,

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಎ. ತಿಪ್ಪೇಸ್ವಾಮಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ.**

**ವಿಷಯ:** ರಾಜ್ಯದಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ತತ್ಕಾಲಿಕ ಮತ್ತು ಅಕ್ರಮ-ಸಕ್ರಮ ಯೋಜನೆಗಳ ಅಡಿಯಲ್ಲಿ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಕಲ್ಪಿಸಲು ಅವಕಾಶವಿದೆ. ಈ ಎರಡು ಯೋಜನೆ ಅಡಿಯಲ್ಲಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ರೈತರು ಅರ್ಜಿ ಸಲ್ಲಿಸಿ, ಠೇವಣಿ ಪಾವತಿಸಿದ್ದರೂ ವಿದ್ಯುತ್ ಪರಿವರ್ತಕ (ಟ್ರಾನ್ಸ್ ಫಾರಮರ್- ಟಿಸಿ) ನೀಡುತ್ತಿಲ್ಲ. ಈ ಯೋಜನೆಗಳ ಅಡಿಯಲ್ಲಿ ರೈತರು ರೂ.28 ಸಾವಿರ ಠೇವಣಿ ಕಟ್ಟಿ, ಗುತ್ತಿಗೆದಾರರುಗೆ ನೀಡುವುದು ಇತ್ಯಾದಿ ಸೇರಿ ರೈತರಿಗೆ ರೂ.40 ಸಾವಿರ ವರೆಗೂ ಖರ್ಚು ಬರುತ್ತಿದೆ. ಆದರೆ, ರೈತರಿಂದ ಅರ್ಜಿ ಸ್ವೀಕರಿಸಿ, ಹಣ ಕಟ್ಟಿಸಿಕೊಳ್ಳುವಾಗ ಇರುವ ಆಸಕ್ತಿ, ಹಣ ಕಟ್ಟಿಸಿಕೊಂಡ ನಂತರ ವಿದ್ಯುತ್ ಸಂಪರ್ಕ ಕಲ್ಪಿಸುವಾಗ ಇರುವುದಿಲ್ಲ. ಇದರಿಂದ ರಾಜ್ಯದ ಲಕ್ಷಾಂತರ ರೈತರ ಕೃಷಿ ಪಂಪ್ ಸೆಟ್‌ಗೆ ವಿದ್ಯುತ್ ಸಂಪರ್ಕವಿಲ್ಲದೆ, ದಿಕ್ಕು ತೋಚದಂತೆ ಆಗಿದ್ದಾರೆ. ಅಲ್ಲದೆ, ರೈತರಿಗೆ ಕಳಪೆ ಗುಣಮಟ್ಟದ ಟ್ರಾನ್ಸ್ ಫಾರಮರ್- ಟಿಸಿಗಳನ್ನು ನೀಡುತ್ತಿದ್ದು, ಆರೇಳು ತಿಂಗಳಲ್ಲಿ ಸುಟ್ಟು ಹೋಗುತ್ತಿವೆ. ಹಲವಾರು ಜಿಲ್ಲೆಗಳಲ್ಲಿ ಟ್ರಾನ್ಸ್ ಫಾರಮರ್‌ಗಳು ಉಗ್ರಾಣದಲ್ಲಿ ಕೊಳೆಯುತ್ತ ಬಿದ್ದಿವೆ, ಆದರೆ, ಅಧಿಕಾರಿಗಳು ಈಗ ಬಜೆಟ್ ಇಲ್ಲ, ಅನುದಾನ ಬಂದ ಕೂಡಲೇ ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಸರಬರಾಜು ನೀಡಲಾಗುವುದು ಎಂದು ಪೊಳ್ಳು ಭರವಸೆಗಳನ್ನು ಅಧಿಕಾರಿಗಳು ನೀಡುತ್ತಿದ್ದಾರೆ. ರೈತರು ಚಿನ್ನಾಭರಣ ಅಡವಿಟ್ಟು ಸಾಲ ಮಾಡಿ ವಿದ್ಯುತ್ ಸಂಪರ್ಕಕ್ಕಾಗಿ ಠೇವಣಿ ಹಣ ಮತ್ತಿತರ ಖರ್ಚುಗಳನ್ನು ಸರಿದೂಗಿಸಿಕೊಂಡಿದ್ದಾರೆ. ವಿದ್ಯುತ್ ಪೂರೈಕೆಯು ಇಲ್ಲದೆ ಬೆಳೆಗಳಿಗೆ ನೀರಿನ ಸಮಸ್ಯೆ ಒಂದೆಡೆಯಾದರೆ, ಇನ್ನೊಂದೆಡೆ ಸಾಲ ತೀರಿಸಲು ಪರದಾಡಬೇಕಾಗಿದೆ. ಇಂತಹ ಮಹತ್ವದ ವಿಷಯವನ್ನು ಶೂನ್ಯವೇಳೆ ಪ್ರಸ್ತಾಪಿಸಿ, ಸರ್ಕಾರದ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ.

* * * * *

**ಉತ್ತರ:-**

ಶೀಘ್ರ ಸಂಪರ್ಕ ಯೋಜನೆಯಡಿ (ತತ್ಕಾಲ್) ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಕೆಳಕಂಡ ನಿಯಮಗಳನ್ನು ಅನುಸರಿಸಲಾಗುತ್ತಿದೆ.

- ಹೊಸದಾಗಿ ಅರ್ಜಿ ನೊಂದಾಯಿಸುವ ರೈತರು ರೂ.10.000/- ಮತ್ತು ಠೇವಣಿ ಹಣವನ್ನು ಪಾವತಿಸುವುದು.
- ರೈತರು ಇಚ್ಛಿಸಿದಲ್ಲಿ ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿಯಲ್ಲಿ ಮೂಲಭೂತಸೌಕರ್ಯವನ್ನು ರಚಿಸಿಕೊಳ್ಳುವುದು.
- ಪರಿವರ್ತಕ ಅಗತ್ಯವಿದ್ದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ 25 ಕೆವಿಎ ಪರಿವರ್ತಕವನ್ನು ಒದಗಿಸಲಾಗುವುದು.

ರಾಜ್ಯದಲ್ಲಿನ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಸರ್ಕಾರಿ ಸುತ್ತೋಲೆ ಸಂಖ್ಯೆ ಇಎನ್/41/ ವಿಎಸ್‌ಸಿ/2014 ದಿನಾಂಕ 14-07-2014 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಅಕ್ರಮ-ಸಕ್ರಮ ಹಾಗೂ ಹೊಸದಾಗಿ ನೋಂದಾಯಿಸಲ್ಪಡುವ ಅರ್ಜಿಗಳು ಎಂಬ ಬೇಧವಿಲ್ಲದೆ ನೋಂದಾಯಿಸಲ್ಪಡುವ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮೂಲಭೂತ ಸೌಕರ್ಯ ಶುಲ್ಕ ರೂ.10,000/- ಗಳ ಜೊತೆಗೆ ಠೇವಣಿ ಹಣವನ್ನು ಪಾವತಿಸಿದ ರೈತರ ಜಮೀನಿನ

ಸ್ಥಳ ಪರಿಶೀಲನೆ ಮಾಡಿದ ನಂತರ ಪಂಪ್ ಸೆಟ್‌ಗಳ ಹತ್ತಿರವಿರುವ ವಿದ್ಯುತ್ ಮಾರ್ಗದ ಲಭ್ಯತೆ ಮತ್ತು ಪರಿವರ್ತಕದ ಹಾಲಿ ಇರುವ ಹೊರೆಯನ್ನು ಪರಿಶೀಲಿಸಿ ತಾಂತ್ರಿಕ ಸಾಧ್ಯತೆಗನುಗುಣವಾಗಿ ಸರ್ವೀಸ್ ಮೈನ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಎಲ್.ಟಿ. ಮಾರ್ಗ ವಿಸ್ತರಣೆ / ಅವಶ್ಯಕತೆ ಇರುವಲ್ಲಿ ಪರಿವರ್ತಕಗಳನ್ನು ಅಳವಡಿಸಿ ಜೇಷ್ಠತಾ ಪಟ್ಟಿಯನುಸಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಅವಶ್ಯಕತೆವಿರುವೆಡೆಯಲ್ಲಿ ಪರಿವರ್ತಕಗಳನ್ನು ಅಳವಡಿಸಲು ರೈತರಿಂದ ಯಾವುದೇ ಶುಲ್ಕವನ್ನು ವಿದ್ಯುತ್ ಸರಬರಾಜು ಕಂಪನಿಗಳು ತೆಗೆದುಕೊಳ್ಳುತ್ತಿರುವುದಿಲ್ಲ. ಬಾಕಿ ಇರುವ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ತಗಲುವ ಅನುದಾನವನ್ನು (Capex Budget) ಕಾಲಕಾಲಕ್ಕೆ ನಿಗದಿಪಡಿಸಿ, ಕಾಮಗಾರಿಗಳಿಗೆ ಟೆಂಡರ್ ಕರೆದು, ಜೇಷ್ಠತೆ ಆಧಾರದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲಾಗುವುದು.

ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅಕ್ಟೋಬರ್-2022ರ ಅಂತ್ಯದವರೆಗೆ ಶೀಘ್ರ ಸಂಪರ್ಕ ಯೋಜನೆಯಡಿ ವಿದ್ಯುದೀಕರಣಗೊಂಡ ಮತ್ತು ವಿದ್ಯುದೀಕರಣಗೊಳಿಸಲು ಬಾಕಿ ಇರುವ ಅರ್ಜಿಗಳ ವಿವರಗಳು ಈ ಕೆಳಕಂಡಂತಿವೆ-

| ಕಂಪನಿಯ ಹೆಸರು | ಶೀಘ್ರ ಸಂಪರ್ಕ ಯೋಜನೆಯಡಿ ನೋಂದಣಿ ಗೊಂಡ ಅರ್ಜಿಗಳ ಸಂಖ್ಯೆ | ಮೂಲಭೂತ ಸೌಕರ್ಯ ಶುಲ್ಕ ರೂ.10000/- & ಇತರೆ ಠೇವಣಿಗಳನ್ನು ಪಾವತಿಸಿರುವ ಅರ್ಜಿಗಳ ಸಂಖ್ಯೆ | ಅರ್ಜಿದಾರರಿಂದ ಮೂಲಭೂತ ಸೌಕರ್ಯ ಕಲ್ಪಿಸಿಕೊಂಡ ಅರ್ಜಿಗಳ ಸಂಖ್ಯೆ | ವಿದ್ಯುತ್ ಸಂಪರ್ಕ ಗೊಂಡ ಅರ್ಜಿಗಳ ಸಂಖ್ಯೆ | ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ | ಎಸ್ಕಾಂಗಳಿಂದ ಪರಿವರ್ತಕಗಳನ್ನು ಸರಬರಾಜು ಮಾಡಲು ಬಾಕಿ ಇರುವ ಅರ್ಜಿಗಳ ಸಂಖ್ಯೆ | ಅರ್ಜಿದಾರರಿಂದ ಮೂಲಭೂತ ಸೌಕರ್ಯ ಕಲ್ಪಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|---|---|---|
| ಬೆಸ್ಕಾಂ | 27591 | 27572 | 24633 | 24118 | 24118 | 515 | 2939 |
| ಮೆಸ್ಕಾಂ | 7064 | 6836 | 6754 | 6622 | 3287 | 132 | 82 |
| ಸೆಸ್ಕ್ | 9324 | 9324 | 9316 | 9301 | 5387 | 15 | 8 |
| ಹೆಸ್ಕಾಂ | 23974 | 22305 | 20787 | 20179 | 19903 | 608 | 1518 |
| ಜೆಸ್ಕಾಂ | 3162 | 2565 | 1847 | 1103 | 1103 | 744 | 718 |
| **ಒಟ್ಟು** | **71115** | **68602** | **63337** | **61323** | **53798** | **2014** | **5265** |

ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅಕ್ಟೋಬರ್ 2022ರ ಅಂತ್ಯಕ್ಕೆ ಅಕ್ರಮ ಸಕ್ರಮ ಮತ್ತು ಸಾಮಾನ್ಯ ಅರ್ಜಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಬಂದಿರುವ ಅರ್ಜಿಗಳ ಸಂಖ್ಯೆ, ಮೂಲಭೂತ ಸೌಕರ್ಯ ಕಲ್ಪಿಸಲು ಪಾವತಿಸಿರುವ ಶುಲ್ಕ ಮತ್ತು ಅವಶ್ಯವಿರುವೆಡೆ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆಯ ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು ಕೆಳಕಂಡಂತಿವೆ:-

| ಕ್ರ. ಸಂ | ಜಿಲ್ಲೆ | ವಿದ್ಯುತ್ ಸಂಪರ್ಕ ಕೋರಿ ರೈತರಿಂದ ಬಂದಿರುವ ಅರ್ಜಿಗಳ ಸಂಖ್ಯೆ | ವಿದ್ಯುತ್ ಸಂಪರ್ಕಕ್ಕಾಗಿ ರೈತರಿಂದ ಹಣ ಪಾವತಿ ಮಾಡಿರುವ ಅರ್ಜಿಗಳ ಸಂಖ್ಯೆ | ಮೂಲಭೂತ ಸೌಕರ್ಯ ಕಲ್ಪಿಸಲಾಗಿರುವ ಅರ್ಜಿಗಳ ಸಂಖ್ಯೆ | ಅವಶ್ಯವಿರುವೆಡೆಯಲ್ಲಿ ಅಳವಡಿಸಲಾದ ಪರಿವರ್ತಕಗಳ ಸಂಖ್ಯೆ | ಮೂಲಭೂತ ಸೌಕರ್ಯ ಕಲ್ಪಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|---|---|
| 1 | ಬೆಸ್ಕಾಂ | 401033 | 303965 | 249875 | 247154 | 54090 |
| 2 | ಮೆಸ್ಕಾಂ | 169280 | 146105 | 122294 | 19137 | 23811 |
| 3 | ಸೆಸ್ಕ್ | 191525 | 191525 | 166114 | 46751 | 25411 |
| 4 | ಹೆಸ್ಕಾಂ | 419962 | 182305 | 155139 | 104325 | 27166 |
| 5 | ಜೆಸ್ಕಾಂ | 62466 | 50726 | 43183 | 13060 | 7543 |

ಕೃಷಿ ಪಂಪ್‌ಸೆಟ್‌ಗಳಿಗೆ 4 ಸ್ಟಾರ್ ರೇಟೆಡ್ ವಿದ್ಯುತ್ ಪರಿವರ್ತಕಗಳನ್ನು ಅನುಮೋದಿತ ಸರಬರಾಜುದಾರರಿಂದ ಪಡೆದು, ಅವಶ್ಯಕತೆ ಇರುವೆಡೆಯಲ್ಲಿ ಅಳವಡಿಸಿ, ವಿದ್ಯುತ್ ಮೂಲಭೂತ ಸೌಕರ್ಯವನ್ನು ಕಲ್ಪಿಸಲಾಗುತ್ತಿದ್ದು, ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

**ಸಂಖ್ಯೆ: ಎನರ್ಜಿ 287 ಇಬಿಎಸ್ 2022**

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರ